# ತಿರುಪತಿ ವೆಂಕಟರಮಣ ನಿನಗೇತಕೆ ಬಾರದೊ ಕರುಣ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings are as per book in Ref. 1. These wordings are followed by the singer. Wordings in Ref. 2 are matching with Ref. 1 except few differences, which are marked in yellow highlights.

ರಾಗ ಖರಹರ ಪ್ರಿಯ ಏಕ ತಾಳ

ತಿರುಪತಿ ವೆಂಕಟರಮಣ ನಿನಗೇತಕೆ ಬಾರದು ಕರುಣ
ನಂಬಿದೆ ನಿನ್ನಯ ಚರಣ ಪರಿಪಾಲಿಸಬೇಕೋ ಕರುಣ ॥ ಪ ॥

ಅಳಗಿರಿಯಿಂದಲಿ ಬಂದ ಸ್ವಾಮಿ
ಅಂಜನಗಿರಿಯಲಿ ನಿಂದ
(ಕೊಳಲೂದೋ ಧ್ವನಿ) (ಕೊಳಲು ಧ್ವನಿಯೂದೋ) ಚಂದ ನಮ್ಮ
ಕುಂಡಲರಾಯ ಮುಕುಂದ ॥ 1 ॥

ಬೇಟೆಯಾಡುತ ಬಂದ ಸ್ವಾಮಿ
ಬೆಟ್ಟದ ಮೇಲೆ ನಿಂದ
ನೀಟುಗಾರ ಗೋವಿಂದ ಅಲ್ಲಿ
ಜೇನು ಸಕ್ಕರೆಯನು ತಿಂದ ॥ 2 ॥

ಮೂಡಲ ಗಿರಿಯಲಿ ನಿಂತ ಮುದ್ದು
ವೆಂಕಟಪತಿ ಬಲವಂತ
ಈಡಿಲ್ಲ ನಿನಗೆ ಶ್ರೀಕಾಂತ ಈ
ರೇಳು ಲೋಕಕನಂತ ॥ 3 ॥

ಆಡಿದರೆ ಸ್ಥಿರವಪ್ಪ ಅ

ಬದ್ದಗಳಾಡಲು ಒಪ್ಪ
ಬೇಡಿದ ವರಗಳನಿಪ್ಪ
ನಮ್ಮ ಮೂಡಲಗಿರಿ ತಿಮ್ಮಪ್ಪ ॥ 4 ॥

ಅಪ್ಪವು ಅತಿರಸ ಮೆದ್ದ ಸ್ವಾಮಿ
ಅಸುರರ ಕಾಲಲಿ ಒದ್ದ
ಸತಿಯರ ಕೂಡಾಡುತಲಿದ್ದ ಸ್ವಾಮಿ
ಸಕಲ ದುರ್ಜನರನು ಗೆದ್ದ ॥ 5 ॥

ಬಗೆ ಬಗೆ ಭಕ್ಷ್ಯ ಪರಮಾನ್ನ ನಾನಾ
ಬಗೆಯ ಸಕಲ ಶಾಲ್ಯಾನ್ನ
ಬಗೆ ಬಗೆ ಸೊಬಗು ಮೋಹನ್ನ ನಮ್ಮ
ನಗು ಮುಖದ ಸುಪ್ರಸನ್ನ ॥ 6 ॥

ಕಾಶಿ ರಾಮೇಶ್ವರದಿಂದ ಅಲ್ಲಿ
ಕಾಣಿಕೆ ಬರುವುದೆ ಚಂದ
ದಾಸರ ಕೂಡೆ ಗೋವಿಂದ ಅಲ್ಲಿ
ದಾರಿ ನಡೆವುದೇ ಚೆಂದ ॥ 7 ॥

ಎಲ್ಲಾ ದೇವರ ಗಂಡ ಅವ
ಚಿಲ್ಲರೆ (ದೈವರ) (ದೈವದ)ಮಿಂಡ
ಬಲ್ಲಿದವರಿಗೆ ಉದ್ದಂಡ ಶಿವ
ಬಿಲ್ಲ ಮುರಿದ ಪ್ರಚಂಡ ॥ 8 ॥

ಕಾಸು ತಪ್ಪಿದರೆ ಪಟ್ಟಿ ಬಡ್ಡಿ
ಕಾಸು ಬಿಡದೆ ಗಂಟು ಕಟ್ಟಿ
ದಾಸನೆಂದರೆ ಬಿಡ ಗಟ್ಟಿ ನಮ್ಮ
ಕೇಸಕ್ಕಿ ತಿಮ್ಮಪ್ಪ ಶೆಟ್ಟಿ ॥ 9 ॥

ದಾಸರ ಕಂಡರೆ ಪ್ರಾಣ ತಾ
ಧರೆಯೊಳಗಧಿಕ ಪ್ರವೀಣ
ದ್ವೇಷಿಯ ಗಂಟಲ ಗಾಣ ನಮ್ಮ

ದೇವಗೆ ನಿತ್ಯ ಕಲ್ಯಾಣ ॥ 10 ॥

ಮೋಸ ಹೋಗುವನಲ್ಲಯ್ಯ ಒಂದು
ಕಾಸಿಗೆ ಒಡ್ಡುವ ಕೈಯ
ಏಸು ಮಹಿಮೆಗಾರನಯ್ಯ ನಮ್ಮ
ವಾಸುದೇವ ತಿಮ್ಮಯ್ಯ ॥ 11 ॥

ಚಿತ್ತಾವಧಾನ ಪರಾಕು ನಿನ್ನ
ಚಿತ್ತದ ದಯ ಒಂದೇ ಸಾಕು
ಸತ್ಯವಾಹಿನಿ ನಿನ್ನ ವಾಕು
ನೀನು ಸಕಲ ಜನರಿಗೆ ಬೇಕು ॥ 12 ॥

ಅಲ್ಲಲ್ಲಿ ಪರಿಷೆಯ ಗುಂಪು ಮ
ತ್ತಲ್ಲಲ್ಲಿ ತೋಪಿನ ತಂಪು
ಅಲ್ಲಲ್ಲಿ ಸೊಗಸಿನ ಸೊಂಪು ಮ
ತ್ತಲ್ಲಲ್ಲಿ ಪರಿಮಳದಿಂಪು ॥ 13 ॥

ಅಲ್ಲಲ್ಲಿ ಜನಗಳ ಕೂಟ ಮ
ತ್ತಲ್ಲಲ್ಲಿ ಬ್ರಾಹ್ಮಣರೂಟ
ಅಲ್ಲಲ್ಲಿ ಪಿಡಿದ ಕೋಲಾಟ ಮ
ತ್ತಲ್ಲಿಂದ ಊರಿಗೆ ಓಟ ॥ 14 ॥

ಪಾಪ ವಿನಾಶಿನಿ ಸ್ನಾನ ಹರಿ
ಪಾದೋದಕವೆ ಪಾನ
ಕೋಪ ತಾಪಗಳ ನಿಧಾನ ನಮ್ಮ
ಪುರಂದರ ವಿಠಲನ ಧ್ಯಾನ ॥ 15 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪದದಲ್ಲಿ ತಿರುಮಲೆ–ತಿರುಪತಿಯ ವರ್ಣನೆಯಿದೆ; ಯಾತ್ರೆಯ ವಿವರಗಳೂ ಬಂದಿವೆ. ಅಳಗಿರಿ, ಅಂಜನಗಿರಿ, ಮೂಡಲಗಿರಿ ಇವೆಲ್ಲ ತಿರುಮಲೆಯ ಹೆಸರುಗಳು ಅಳಗಿರಿಯು ಕಡಪಾ ಬಳಿಯಿರುವ ಪುಷ್ಪಗಿರಿಯೆಂದೂ ಹೇಳುತ್ತಾರೆ.

**ಕುಂಡಲರಾಯ –** ಕೊಂಡವೆಂದರೆ ಬೆಟ್ಟ; ತೆಲುಗು 'ಕೊಂಡಲವಾಡ' ಎನ್ನುವುದರ ಕನ್ನಡ ರೂಪ ಇದು.

**ನೀಟುಗಾರ –** ನೇರಾಗಿ ನಡೆಯುವವನು (ನೇಟು).

**ಈಡಿಲ್ಲ –** ಸಮರಿಲ್ಲ.

**ತಿಮ್ಮಪ್ಪ** – ತಿರುಮಲೆಯಪ್ಪ ಎನ್ನುವುದರ ಮೊಟಕುರೂಪ.

**ಅಪ್ಪ** – ಅತಿರಸ **–** ಭಕ್ಷ್ಯ ವಿಶೇಷ.

**ದಾಸರ ಕೂಡೆ...** – ಅಲ್ಲಿ ಯಾತ್ರಿಕರು ಬೆಟ್ಟವೇರುವಾಗ 'ಗೋವಿಂದ' 'ಗೋವಿಂದ' ಎಂದು ಗಟ್ಟಿಯಾಗಿ ಹೇಳುತ್ತಿರುವುದು ವಾಡಿಕೆ.

**ಬಲ್ಲಿದರಿಗೆ ಉದ್ದಂಡ** – ಅವನ ಹಿರಿಮೆಯನ್ನು ಬಲ್ಲವರಿಗೆ ಹಿರಿಯ; ಉತ್ ದಂಡ ಎಂದರೆ ಎತ್ತಿರುವ ಕೋಲು ಎಂದು ಅಕ್ಷರಾರ್ಥ; ಅಧಿಕಾರಗಳ ದಂಡವು ಶಿಕ್ಷೆ – ರಕ್ಷಣೆಗಳೆರಡಕ್ಕೂ ಸರಿ. ತಪ್ಪನ್ನು ಬಿಡಿಸಿ ಒಪ್ಪನ್ನು ಮಾನ್ಯ ಮಾಡಿ ಕಾಪಾಡುವವನು.

**ಪಟ್ಟಿ ಬಡ್ಡಿ –** ಲೆಖ್ಖವಿಟ್ಟ ಬಡ್ಡಿ ಹಣ.

**ದೇವರಿಗೆ ನಿತ್ಯಕಲ್ಯಾಣ** – ಇಲ್ಲಿ ಗುಡಿಯಲ್ಲಿ ಪ್ರತಿದಿನವೂ ದೇವರಿಗೆ ಕಲ್ಯಾಣೋತ್ಸವ ಸೇವೆ ನಡೆಯುತ್ತದೆ.

**ನಿಧಾನ –** ನಿಧನ; ಕೋಪತಾಪಗಳು ಅಡಗುವುವು.

**Classification:** Keerthane
**Ankita:** purandara vittala
**Location:** Tirupati
**Category:** Srinivasa Aradhane
**Group Words:** Vishnu, srinivasa, karuna, kolalu, mukunda, parvata, govinda, loka, asura, patni, kashi, rameshawara, pati, shiva, billu, rokka, bhumi, mosa, chitta, satya, jana, brahmana, ooru, papa, snana, Dhyana
**Pravachana:** NA
**Explanation:** NA